೭೮ ಶ್ರೀ ಹೆಚ್. ಕೆ. ದುವ್ವೂ, ಸಂಪಾದಕ, ಹಿಂದೂಸ್ಥಾನ್ ಟೈಮ್ಸ್, ನವದೆಹಲಿ

೭೯ ಶ್ರೀ ವಿನೋದ್ ಕುಮಾರ್ ಮಿಶ್ರ, ಸಂಪಾದಕ, ಡೈಲಿ ಹಿಂದೂಸ್ಥಾನ್ (ಹಿಂದಿ) ನವದೆಹಲಿ

೮೦ ಶ್ರೀ ನಿಹಲ್ ಸಿಂಗ್, ಸಂಪಾದಕ, ಇಂಡಿಯಾ ಪೋಸ್ಟ್, ಬೊಂಬಾಯಿ

೮೧ ಪ್ರೊ. ದೀರು ಬಾಯಿ ಸೇಟ್, ಸೆಂಟರ್ ಫಾರ್ ಸ್ಟಡಿ ಆಫ್ ಡೆವಲಪ್ಪಿಂಗ್ ಸೊಸೈಟಿ, ನವದೆಹಲಿ

೮೨ ಶ್ರೀ ಕೃಷ್ಣರಾಜ್, ಸಂಪಾದಕ, ಎಕನಾಮಿಕ್ಸ್ ಅಂಡ್ ಪೋಲಿಟಿಕಲ್, ವೀಕ್ಲಿ, ಬೊಂಬಾಯಿ

೮೩ ಶ್ರೀಮತಿ ಕಲ್ಪನಾ ಶರ್ಮ, ಸಂಪಾದಕಿ, ಸಂಡೇ ಸ್ಟ್ಯಾಂಡರ್ಡ್ ಆಫ್ ಇಂಡಿಯನ್ ಎಕ್ಸ್‌ಪ್ರೆಸ್, ಬೊಂಬಾಯಿ

೮೪ ಶ್ರೀ ಭರತ್ ಭೂಷಣ್, ಸಂಪಾದಕ, ಟೈಮ್ಸ್ ಆಫ್ ಇಂಡಿಯಾ, ನವದೆಹಲಿ

೮೫ ಶ್ರೀ ಕೇವಲ್ ವರ್ಮ, ಪತ್ರಿಕೋಧ್ಯಮ, ನವದೆಹಲಿ

೮೬ ಕಂಪಾರಿ ಥವ್ವಲಿ ಸಿಂಗ್, ಇಂಡಿಯನ್ ಎಕ್ಸ್‌ಪ್ರೆಸ್, ನವದೆಹಲಿ

೮೭ ಪ್ರೊ. ಡಿ. ಎಲ್. ಸೇಟ್

೮೮ ಶ್ರೀ ಕೆ. ಚಂದ್ರಶೇಖರನ್, ಶಿಕ್ಷಣ ಮಂತ್ರಿ ಕಾನೂನು ಮಂತ್ರಿಗಳು, ಕೇರಳ

೮೯ ಶ್ರೀ ಚೈಧುರಿ ಬ್ರಹ್ಮ ಪ್ರಕಾಶ್, ಮಾಜಿ ಸಂಸತ್ ಸದಸ್ಯರು

ಅನುಬಂಧ—೨

೧ ಶ್ರೀ ಈ. ಕೆ. ನಯನಾರ್, ಮುಖ್ಯ ಮಂತ್ರಿಗಳು, ಕೇರಳ ಸರ್ಕಾರ, ತಿರುವಂತಪುರ

೨ ಶ್ರೀ ಪ್ರಫುಲ್ಲ ಕುಮಾರ್ ಮಹಂತಾ, ಮುಖ್ಯ ಮಂತ್ರಿಗಳು, ಅಸಾಂ ಸರ್ಕಾರ ಗೌಹಾಟಿ

೩ ಶ್ರೀ ಜ್ಯೋತಿ ಬಸು, ಮುಖ್ಯ ಮಂತ್ರಿಗಳು, ಪಶ್ಚಿಮ ಬಂಗಾಳ ಸರ್ಕಾರ, ಕಲ್ಕತ್ತ

೪ ಶ್ರೀ ದೇವಿಲಾಲ್, ಮುಖ್ಯ ಮಂತ್ರಿಗಳು, ಹರಿಯಾಣ ಚಂಡೀಘಡ್

೫ ಶ್ರೀ ನೃಪೇನ ಚಕ್ರವರ್ತಿ, ಮುಖ್ಯ ಮಂತ್ರಿಗಳು, ತ್ರಿಪುರ ಸರ್ಕಾರ, ಅಗರ್ತಲಾ, ಮಿಜೋರಾಂ ಸರ್ಕಾರ

೬ ಶ್ರೀ ಲಾಲ್‌ಡೆಂಗ, ಮುಖ್ಯ ಮಂತ್ರಿಗಳು, ಮಿಜೋರಾಂ ಸರ್ಕಾರ, ಐಜ್‌ವಾಲ್

೭ ಶ್ರೀ ನರಬುಹದ್ದೂರ್ ಬಂಡಾರಿ, ಮುಖ್ಯ ಮಂತ್ರಿಗಳು, ಸಿಕ್ಕಿಂ ಸರ್ಕಾರ, ಗ್ಯಾಂಗಟಾಕ್

೮ ಶ್ರೀ ಎನ್. ಟಿ. ರಾಮರಾವ್, ಮುಖ್ಯ ಮಂತ್ರಿಗಳು, ಆಂಧ್ರ ಸರ್ಕಾರ, ಹೈದರಾಬಾದ್

ರಾಜ್ಯದ ಸಾರಿಗೆ ಸಂಸ್ಥೆಗೆ ಹೂಡಿರುವ ಬಂಡವಾಳ

ಶ್ರೀ ಪ್ರತಾಪ ಚಂದ್ರಶೆಟ್ಟಿ ಕೆ. (ಕುಂದಾಪುರ),— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಂಸ್ಥಾಪನೆಗೊಂಡಾಗಿನಿಂದ ೩೧-೩-೮೮ರವರೆಗೆ ಹೂಡಿದ ಬಂಡವಾಳ, ಬಸ್ಸುಗಳ ಸಂಖ್ಯೆ, ಲಾಭ ಹಾಗೂ ನಷ್ಟದ ವರ್ಷವಾರು ವಿವರಗಳೇನು ?

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯಲ್ಲಿ ನಷ್ಟ ತಪ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ೩೧–೩–೮೭ರ ಅಂತ್ಯದ ವೇಳೆಗೆ ಒಟ್ಟು ೨೭೧೪೨.೯೨ ಲಕ್ಷ ರೂ ಗಳ ಬಂಡವಾಳವನ್ನು ಹೂಡಲಾಗಿದೆ. ೧೯೮೭–೮೮ನೇ ಸಾಲಿನ ಲೆಕ್ಕ ಪತ್ರಗಳು ಇನ್ನೂ ಅಪೂರ್ಣಗೊಂಡಿರುತ್ತದೆ ಮತ್ತು ಸೆಪ್ಟೆಂಬರ್ ೧೯೮೮ರ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಆದುದರಿಂದ ೩೧–೩–೮೮ರ ಅಂತ್ಯದ ವೇಳೆಗೆ ಸಂಸ್ಥೆಯಲ್ಲಿ ಹೂಡಿರುವ ಒಟ್ಟು ಬಂಡವಾಳದ ವಿವರಗಳು ಪ್ರಕೃತಕ್ಕೆ ಲಭ್ಯವಿರುವುದಿಲ್ಲ. ಆದಾಗ್ಯೂ ೩೧–೩–೮೮ರ ಅಂತ್ಯಕ್ಕೆ ಒಟ್ಟು ಬಂಡವಾಳವು ೩೧೩೫೭.೦೨ ಲಕ್ಷ ರೂ.ಗಳಾಗಬಹುದೆಂದು ಅಂದಾಜು ಮಾಡಲಾಗಿದೆ.

೧೯೭೫–೭೬ನೇ ಸಾಲಿನಿಂತ ಮೊದಲಂ ಸಂಸ್ಥೆಯು ಲಾಭವನ್ನು ಗಳಿಸುತ್ತಿತ್ತು. ಸಂಸ್ಥೆಯಂ ಅನುಭವವಿರುವ ವರ್ಷವಾರು ಲಾಭ ನಷ್ಟಗಳು ವಿವರಗಳಂತೆ ಕೆಳಕಂಡಂತೆ ಇರುತ್ತವೆ. ಆದಾಗ್ಯೂ ಸದರೀ ಲಾಭ, ನಷ್ಟಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಂಡವಾಳ ಹೂಡಿಕೆಯ ಮೇಲಿನ ಬಡ್ಡಿ ಮತ್ತು ಸವಕಲು ನಿಧಿಗೆ ವಂತಿಗೆಯನ್ನು ಕಾದಿರಿಸಿದ ನಂತರ ಸಂಭವಿಸಿರುವ ನಷ್ಟವಾಗಿರುತ್ತದೆ.

ಸಾಲು	ಲಾಭ (ಲಕ್ಷ ರೂ.ಗಳಲ್ಲಿ)	ನಷ್ಟ	ವಾಹನಗಳ ಸಂಖ್ಯೆ
೧೯೭೦–೭೧ (೧–೮–೭೦ರಿಂದ ೩೧–೩–೭೧)	೭–೦೨	—	೧೭೯೨
೧೯೭೧–೭೩	೩೨–೭೦	—	೧೯೭೨
೧೯೭೩–೭೯	೧೦–೦೯	—	೧೯೮೬
೧೯೭೪–೭೫	೨೦–೦೩	—	೧೯೮೮
೧೯೭೫–೭೬	೧೪–೯೨	—	೨೦೭೨
೧೯೭೬–೭೭	೧೭–೩೬	—	೨೨೭೪
೧೯೭೭–೭೮	೪೬–೩೦	—	೨೨೮೯
೧೯೭೮–೭೯	೬೮–೧೪	—	೨೨೦೫
೧೯೭೯–೮೦	೪೬–೦೫	—	೨೯೩೦
೧೯೮೦–೮೧	೭೫–೪೮	—	೩೧೭೦
೧೯೮೧–೮೨	೬೧–೫೫	—	೩೧೭೨
೧೯೮೨–೮೩	೯–೩೫	—	೩೩೮೪
೧೯೮೩–೮೪	೨೦–೯೮	—	೩೪೯೯
೧೯೮೪–೮೫	೬–೫೭	—	೩೬೨೯
೧೯೮೫–೮೬	—	೧೨೯–೮೧	೪೪೫೦
೧೯೮೬–೮೭	೪೧–೫೯	—	೪೫೮೯
೧೯೮೭–೮೮	—	೧೮೪–೫೦	೪೪೪೪
೧೯೮೮–೮೯	—	೬೩–೨೨	೪೮೦೦
೧೯೮೯–೯೦	—	೧೭೫–೫೦	೫೬೫೨
೧೯೯೦–೯೧	—	೧೦೬–೩೬	೫೨೧೪
೧೯೯೧–೯೨	—	೧೦೩೭–೪೭	೫೫೮೯
೧೯೯೨–೯೩	—	೧೪೨೯–೦೫	೫೮೪೬
೧೯೯೩–೯೪	—	೨೦೪೮–೫೦	೬೫೫೪
೧೯೯೪–೯೫	—	೧೪೧೩–೫೧	೭೧೦೦
೧೯೯೫–೯೬	—	೭೯೭–೭೦	೮೦೯೯

೧೯೮೭-೮೮ನೇ ಸಾಲಿನ ಲೆಕ್ಕಪತ್ರಗಳು ಸೆಪ್ಟೆಂಬರ್ ಅಂತ್ಯದ ವೇಳೆಗೆ ಪೂರ್ಣಗೊಳ್ಳಬೇಕಿತ್ತು. ಆದುದರಿಂದ ೧೯೮೭-೮೮ನೇ ಸಾಲಿನ ಲಾಭ ನಷ್ಟದ ನಿಖರವಾದ ವಿವರಗಳು ಈಗ ಲಭ್ಯವಿಲ್ಲ.

ಅ) ಸಂಸೆ ಯು ಅನುಭವಿಸುತ್ತಿರುವ ನಷ್ಟವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನು? ಕೈಗೊಳ್ಳಲಾಗಿದೆ.

೧) ಚಾಲಕ ಮತ್ತು ನಿರ್ವಾಹಕರ ಕೆಲಸದ ನಿರೂಪಿತ ರೀತಿಯನ್ನು ಪುನರ್ರಚಿಸಿ ತನ್ಮೂಲಕ ಹೆಚ್ಚುವರಿ ಆದಾಯವನ್ನು ಗಳಿಸುವುದು.

೨) ಸುಧಾರಿತ ಕ್ರಮಗಳ ಮೂಲಕ ವಾಹನ ಸಂಚಾರ ಮಾರ್ಗಗಳಲ್ಲಿ ತನಿಖೆಗಳನ್ನು ನಡೆಸಿ ತನ್ಮೂಲಕ ಸಂಸ್ಥೆಯ ಆದಾಯವನ್ನು ಹೆಚ್ಚಿಸುವುದು.

೩) ವಾಹನ ಬಳಕೆಯನ್ನು ಹೆಚ್ಚು ಮಾಡುವುದರ ಮೂಲಕ ಪ್ರತಿ ಕಿ.ಮೀ.ಗೆ ತಗಲುತ್ತಿರುವ ಹಾಲಿ ವೆಚ್ಚವನ್ನು ನಿಯಂತ್ರಣಗೊಳಿಸಬಹುದು.

೪) ಇಂಧನದ ಬಳಕೆಯನ್ನು ನಿಗದಿಪಡಿಸುವುದರ ಮೂಲಕ ವೆಚ್ಚವನ್ನು ಕಡಿಮೆ ಮಾಡುವುದು, ಹಿನ್ನೊ ಇಂಜನ್‌ಗಳನ್ನು ಜೋಡಿಸಿದ ವಾಹನಗಳನ್ನು ಉಪಯೋಗಿಸುವುದರ ಮೂಲಕವೂ ಆಲ್ಯೂಮಿನಿಯಂನಿಂದ ಬಸ್ ಬಾಡಿಗಳನ್ನು ನಿರ್ಮಿಸಿ ವಾಹನದ ತೂಕವನ್ನು ಒಂದು ಟನ್ನಿನಷ್ಟು ಕಡಿಮೆ ಮಾಡಿ ತನ್ಮೂಲಕ ಇಂಧನ: ಟೈರುಗಳ ಮತ್ತು ಬಿಡಿ ಭಾಗಗಳ ಬಳಕೆಯನ್ನು ಮಿತವ್ಯಯಗೊಳಿಸಬಹುದು.

೫) ಸರಿಯಾದ ನಿಯಮಿತ ಪ್ರಮಾಣದಲ್ಲಿ ಹೊಸ ಹಾಗೂ ದುರಸ್ತಿ ಮಾಡಿದ ಟೈರುಗಳನ್ನು ವಾಹನಗಳಿಗೆ ಬಳಸುವುದರ ಮೂಲಕವೂ ಸುಧಾರಿತ ಕ್ರಮಗಳನ್ನು ಅಳವಡಿಸಿ ಟೈರುಗಳನ್ನು ರಿಟ್ರೇಡ್ ಮಾಡುವುದರ ಮೂಲಕ ಟೈರುಗಳ ಮೇಲಿನ ಖರ್ಚನ್ನು ಮಿತಗೊಳಿಸಬಹುದು.

೬) ವಾಹನದ ದುರಸ್ತಿ ಕಾರ್ಯವನ್ನು ಹೆಚ್ಚು ಸುಧಾರಿಸುವುದರ ಮೂಲಕ ವಾಹನ ಅಥವಾ ಯಂತ್ರಗಳ ವಿಫಲತೆಯ ಕಾರಣದಿಂದಾಗುವ ಸಂಚಾರ (ಟ್ರಿಪ್)ವನ್ನು ರದ್ದುಪಡಿಸುವ ಪ್ರಸಂಗಗಳನ್ನು ಸಾಧ್ಯವಾದಷ್ಟು ಮೊಟಕುಗೊಳಿಸುವುದು. ಪೂರೈ ಘಟ್ಟಗಳಲ್ಲಿ ನಡೆಯುತ್ತಿರುವ ವಾಹನ ದುರಸ್ತಿ ಮತ್ತು ಸುಧಾರಣೆಯನ್ನು ಎರಡೂ ಘಟ್ಟಗಳಿಗೆ ಸೀಮಿತಗೊಳಿಸಿ ವಾಹನ ದುರಸ್ತಿಯನ್ನು ಚುರುಕುಗೊಳಿಸುವುದು.

೭) ಸಂಸ್ಥೆಯ ಕಾರ್ಯಾಚರಣೆಯ ಎಲ್ಲಾ ಕಾರ್ಯ ನಿರ್ವಹಣಾ ಚಟುವಟಿಕೆಗಳ ಮೇಲೆ ಸೂಕ್ತ ನಿಗಾ ಇಡುವುದರ ಜೊತೆಗೆ ಪರಿಶೀಲಿಸಲು ಕ್ರಮ ತೆಗೆದುಕೊಳ್ಳುವುದು.

ರಾಜ್ಯದಲ್ಲಿ ನಡೆದ ಖಾಸಗೀ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳ ಬಗ್ಗೆ

೧೨೬೫. ಶ್ರೀ ಕೆ ಪ್ರತಾಪಚಂದ್ರಶೆಟ್ಟಿ (ಕುಂದಾಪುರ) — ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧ನೇ ಜನವರಿ ೧೯೮೭ರಿಂದ ೭ಬ್ರವರಿ ೧೯೮೮ರವರೆಗೆ ರಾಜ್ಯದಲ್ಲಿ ವಿವಿಧ ಖಾಸಗಿ ಸಂಸ್ಥೆಗಳ ಆಶ್ರಯದಲ್ಲಿ ನಡೆದ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳಿಂದ ತೊಂದರೆಗೊಳಗಾಗಿರುವ ಎಷ್ಟು ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿವೆ ?

ಆ) ಈ ಉಚಿತ ಶಿಬಿರಗಳನ್ನು ನಡೆಸುವಾಗ ಕೆಲವು ಪ್ರಾಥಮಿಕ ಅವಶ್ಯಕತೆಗಳ ಅಸ್ತಿತ್ವವನ್ನು ಇಲಾಖೆ ಮನಗಂಡು ಅವುಗಳನ್ನು ನಡೆಸಲು ಅನುಮತಿ ನೀಡುವುದೆ ?

ಇ) ಇಂತಹ ಶಿಬಿರಗಳಿಂದ ತೊಂದರೆಗೊಳಗಾದವರ ಸಂಖ್ಯೆ ಎಷ್ಟು ? ಹಾಗೂ ಸರ್ಕಾರ ನೀಡಿರುವ ಪರಿಹಾರ ವಿವರಗಳೇನು ?